A Cipla INITIATIVE

breathe free

# ಟಫ್ಫೀಸ್

ಹೋಗೋಣ ಬನ್ನಿ ಧನ್ ತಾ ಡಾ

ಭಾರತದ ಪೀಡಿಯಾಟ್ರಿಷಿಯನ್ ಜೊತೆ ಸಹಯೋಗದೊಂದಿಗೆ

## ಮಾಯವಾದ ಟ್ರೋಫಿಯ ಪ್ರಕರಣ!

ನಿಗೂಢ ಸಂಖ್ಯೆ. ೩




ಸೂಚನೆ: ಇಲ್ಲಿ ಚಿತ್ರಿಸಲಾದ ಕಥೆಯು ಕೇವಲ ಕಾಲ್ಪನಿಕವಾಗಿದೆ. ಪ್ರತಿನಿಧಿಸಲಾದ ಎಲ್ಲಾ ಪಾತ್ರಗಳು ಮತ್ತು ವಿವರಗಳು ಸಂಪೂರ್ಣವಾಗಿ ಕಾಲ್ಪನಿಕ ಮತ್ತು ವಿವರಣೆ ನೀಡುವ ಉದ್ದೇಶಕ್ಕಾಗಿ ಮಾತ್ರವೇ ಹೊರತು ನಿಜವಾದ ರೋಗಿಯಲ್ಲ.

# ಟಫ್ಫೀಸ್ ಅನ್ನು ಭೇಟಿಯಾಗೋಣ

ಟಫ್ಫೀಸ್ ಉಪಕ್ರಮವು ಮಕ್ಕಳಲ್ಲಿ ಉತ್ತಮ ಉಸಿರಾಟದ ಆರೈಕೆಯನ್ನು ಪ್ರಚೋದಿಸುತ್ತದೆ. ಆಸ್ತಮಾದಂತಹ ದೀರ್ಘಕಾಲೀನ ಉಸಿರಾಟದ ಕಾಯಿಲೆ ಹೊಂದಿರುವ ಮಕ್ಕಳನ್ನು ಅವರ ಪರಿಸ್ಥಿತಿಯಿಂದ ಗುಣಮುಖರಾಗಲು ಅವರನ್ನು ಪ್ರೇರೇಪಿಸುವುದರೊಂದಿಗೆ ಅವರ ಹೆತ್ತವರಿಗೆ ಸಹಾಯ ಮಾಡಲು ಹಾಗು ಅವರನ್ನು ಬಲಪಡಿಸುವ ಮೂಲಕ - ಆಸ್ತಮಾವು ಮಕ್ಕಳ ಮೇಲೆ  ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸದಂತೆ ತಡೆಯುವ ಲೋಕ ರಚಿಸಲು ಟಫ್ಫೀಸ್ ಬದ್ಧರಾಗಿದ್ದಾರೆ.

ಆದ್ದರಿಂದ ದೃಢವಾಗಿರಲು, ಸುಲಭವಾಗಿ ಉಸಿರಾಡಲು ಮತ್ತು ಧನ್ ತಾ ಡಾ ಜೀವನವನ್ನು ನಡೆಸುವುದು ಹೇಗೆಂದು ಇಲ್ಲಿದೆ!




ಅಸ್ತಮಾದಿಂದ ಬಳಲುತ್ತಿರುವ 8 ವರ್ಷದ ವಿಕ್ಕಿಯನ್ನು ಭೇಟಿ ಮಾಡಿ, ಅವನು ಬಹು ವಿಚಿತ್ರವಾದ ಕಾಲ್ಪನಿಕ ಮತ್ತು ಪತ್ತೇದಾರಿ ಕಾದಂಬರಿಗಳ ಬಗ್ಗೆ  ಬಹಳ ಉತ್ಸಾಹವನ್ನು ಹೊಂದಿದ್ದ ! ಅವನು ವಿಲಾಸ್‌ಪುರದಲ್ಲಿ ವಾಸಿಸುತ್ತಿದ್ದ ಮತ್ತು ಅವನ ಅಚ್ಚು ಮೆಚ್ಚಿನ ಜಾಸೂಸ್ ತಲಾಶ್‌ನಂತೆ ವಿಶ್ವದ ಅತ್ಯುತ್ತಮ ಪತ್ತೆದಾರನಾಗುವ ಕನಸು ಕಾಣುತ್ತಿದ್ದ. ಆದರೆ ಒಂದೇ ಒಂದು ಸಮಸ್ಯೆಯೆಂದರೆ - ಅವನು ದಣಿದಿರುವಾಗ ಮತ್ತು ಒತ್ತಡದಲ್ಲಿದ್ದಾಗ ಅಥವಾ ಆಸ್ತಮಾ ದಾಳಿಯ ಬಗ್ಗೆ ಚಿಂತಿಸಿದಾಗ, ಪ್ರಕರಣಗಳನ್ನು ಪರಿಹರಿಸುವತ್ತ ಗಮನಹರಿಸುವುದು ಅವನಿಗೆ ಕಷ್ಟವಾಗುತ್ತದೆ. ಅದೃಷ್ಟವಶಾತ್ ಅವನ ಸ್ನೇಹಿತರು ಮತ್ತು ಅವನ ಪ್ರಾಣಸ್ನೇಹಿತ ಪಫ್ಫೀ ಯ ಸಹಾಯದಿಂದ ಅವನು 'ಗಟ್ಟಿ' ಯಾಗಿರಲು ಮತ್ತು ತನ್ನ ಮಾಮೂಲಿ ಸ್ಥಿತಿಗೆ ಮರಳುವುದು ಹೇಗೆಂದು ತಿಳಿದಿದ್ದ!




ವಿಕ್ಕಿಯ ಅದ್ಭುತ ಮತ್ತು ಧೈರ್ಯಶಾಲಿ 5 ವರ್ಷದ ತಂಗಿ ಮಿನಿಯನ್ನು ಭೇಟಿ ಮಾಡಿರಿ! ಅವಳು ಚುರುಕು, ಬಲು ತುಂಟಿಯಾಗಿದ್ದಳು ಮತ್ತು ರಹಸ್ಯಗಳನ್ನು ಬೇಧಿಸಲು ತನ್ನ ಅಣ್ಣನಿಗೆ ಸಹಾಯ ಮಾಡಲು ಯಾವಾಗಲೂ ಮುಂದಿರುತ್ತಿದ್ದಳು. ಮಿನಿ ಚಿಕ್ಕವಳಾಗಿದ್ದರೂ, ಬಹಳ ಧೈರ್ಯಶಾಲಿ ಮನೋಭಾವವನ್ನು ಹೊಂದಿದ್ದಾಳೆ ಮತ್ತು ವಿಕ್ಕಿಯನ್ನು ನಿರ್ಭೀತ ಮತ್ತು ಬಲಶಾಲಿಯಾಗಿರಲು ಪ್ರಚೋದಿಸುತ್ತಾಳೆ. ಅವರು ಒಟ್ಟಾಗಿದ್ದರೆ  ಅತೀ ಕಠಿಣವಾದ ಪ್ರಕರಣಗಳನ್ನು ಕೈಗೆತ್ತಿಕೊಂಡು ರೋಮಾಂಚಕ ಸಾಹಸಗಳನ್ನು ಮಾಡುವುದನ್ನು ಯಾರಿಂದಲೂ  ತಡೆಯಲಾಗದು.




ವಿಕ್ಕಿಯ ದೊಡ್ಡ, ಬಲವಾದ ಮತ್ತು ಕೆಲವೊಮ್ಮೆ ಒರಟಾಗಿರುವ ಸ್ನೇಹಿತ ಗುಲ್ಲುನನ್ನು ಭೇಟಿ ಮಾಡಿ. ವಿಕ್ಕಿ ಮತ್ತು ಮಿನಿ  ಇವರಿಬ್ಬರ ಸಾಹಸಗಳಲ್ಲಿ ಅವರೊಂದಿಗೆ ಜೊತೆಗೂಡಿ ರಹಸ್ಯಗಳನ್ನು ಬೇಧಿಸುವುದರಲ್ಲಿ ಸಹಾಯ ಮಾಡಲು ಇಷ್ಟಪಡುತ್ತಾನೆ. ಕೆಲವೊಮ್ಮೆ ಅವನ ಒರಟುತನ ಅವರ ತಂಡವನ್ನು ತೊಂದರೆಗೆ ಸಿಲುಕಿಸುತ್ತದೆ, ಆದರೆ ಅವನ ಶಕ್ತಿಯು ಅವರನ್ನು ಉಳಿಸುತ್ತದೆ.




ವಿಕ್ಕಿಯ ವಿಶ್ವಾಸಾರ್ಹ ಒಡನಾಡಿ ಪಫ್ಫೀಯನ್ನು ಭೇಟಿ ಮಾಡಿ. ಈ ಪಾಕೆಟ್ ಗಾತ್ರದ ಪವರ್‌ಹೌಸ್ ಯಾವಾಗಲೂ ವಿಕ್ಕಿಯ ಬಳಿ ಇದ್ದು, ಅವನಿಗೆ ಅಗತ್ಯವಿರುವ ಆತ್ಮವಿಶ್ವಾಸವನ್ನು ಹೆಚ್ಚಿಸಲು, ಯಾವುದೇ ಸವಾಲನ್ನು ನಿಭಾಯಿಸಲು ಸಿದ್ಧನಾಗಿರುತ್ತಾನೆ. ಅವರ ತಂಡದಲ್ಲಿ ಪಫ್ಫೀ ಇರುವುದರಿಂದ, ವಿಕ್ಕಿ ಧನ್ ತಾ ಡಾ ಜೀವನವನ್ನು ನಡೆಸುವುದನ್ನು ಯಾರೂ ತಡೆಯಲಾರರು.





ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಟಫ್ಫೀಸ್ ಇ-ಕಾಮಿಕ್ ಪುಸ್ತಕವನ್ನು ಡೌನ್‌ಲೋಡ್ ಮಾಡಿ

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಭೇಟಿ ನೀಡಿ: **www.breathefree.com/tuffies**

# ಮಾಯವಾದ ಟ್ರೋಫಿಯ ಪ್ರಕರಣ!




ಏನಾಯ್ತು ಅರ್ಜುನ್?
ಏನಾದರು ಕಳೆದು ಹೋಯ್ತಾ?
ಓಟದ ಟ್ರೋಫಿ! ನನಗೆ ಅದು ಸಿಗುತ್ತಿಲ್ಲ. ಅದರ ಜವಾಬ್ದಾರಿ ನಾನೇ ತೆಗುದುಕೊಂಡಿದ್ದೆ.
ಜಿಮ್ ಟೀಚರ್ಗೆ ಇದು ಗೊತ್ತಾದರೆ ನಿಜವಾಗಿಯೂ ನಾನು ನನ್ನ ನಾಯಕತ್ವ ಕಳೆದುಕೊಳ್ಳುತ್ತೇನೆ!
ಚಿಂತೆ ಮಾಡಬೇಡ ಅರ್ಜುನ್. ಅದನ್ನು ಹುಡುಕಲು ನಾವೆಲ್ಲಾ ನಿನಗೆ ಸಹಾಯ ಮಾಡುತ್ತೇವೆ.
ಖಂಡಿತವಾಗಿಯೂ! ಆ ಹೊಳೆಯುವ ಟ್ರೋಫಿಯಿಲ್ಲದೆ ಓಟವು ಪೂರ್ಣಗೊಳ್ಳುವುದಿಲ್ಲ.
ಇದನ್ನು 'ಮಾಯವಾದ ಟ್ರೋಫಿಯ ಪ್ರಕರಣ' ಎಂದು ಕರೆಯೋಣ.
ವಿಕ್ಕಿ ಇಲ್ಲಿರುವಾಗ ಭಯವೇಕೆ!
ಶಾಲೆಯ ಮೈದಾನದಲ್ಲಿ.
ಅಣ್ಣಾ, ಯಾವುದೇ ಸುಳಿವು ಇಲ್ಲದೆ ನಾವು ಟ್ರೋಫಿಯನ್ನು ಹೇಗೆ ಕಂಡುಹಿಡಿಯುವುದು?
ನಾವು ಸಿಸಿಟಿವಿ ದೃಶ್ಯಾವಳಿಯನ್ನು ನೋಡೋಣ, ಅಲ್ಲಿ ನಮಗೆ ಕೆಲವು ಸುಳಿವು ಸಿಕ್ಕರೂ ಸಿಗಬಹುದು.
ಬನ್ನಿ ಹೋಗೋಣ. ಧನ-ತಾ-ಡಾ!


ಶಾಲೆಯ ಸಿಸಿಟಿವಿ ಕಣ್ಗಾವಲು ಕೊಠಡಿಯಲ್ಲಿ.
ನೋಡಿ! ಎಲ್ಲರೂ ರಾಷ್ಟ್ರಗೀತೆ ಹಾಡಿನಲ್ಲಿ ನಿರತರಾಗಿರುವಾಗ ಹಸಿರು ಜಾಕೆಟ್ ಮತ್ತು ನೇರಳೆ ಬಣ್ಣದ ಟೋಪಿ ಧರಿಸಿರುವ ಆ ಹುಡುಗ ಟ್ರೋಫಿಯೊಂದಿಗೆ ನುಸುಳುತ್ತಿದ್ದಾನೆ!
ಹೂಂ... ಈ ನೇರಳೆ ಟೋಪಿ ಪರಿಚಿತ ಮುಖದಂತಿದೆ ಅಲ್ಲವೇ.
ವಿಕ್ಕಿ, ಇದು ರಾಜ್ ಎಂದು ನನಗೆ ಬಹಳ ಅನಿಸುತ್ತಿದೆ.
ಅವನು ಯಾವಾಗಲೂ ಈ ನೇರಳೆ ಟೋಪಿ ಧರಿಸಿರುವುದನ್ನು ನಾನು ನೋಡಿದ್ದೇನೆ.
ಇದು ರಾಜ್, ಅನುಮಾನವೇ ಇಲ್ಲ, ಅಣ್ಣಾ. ಅವನಿಗೆ ಟ್ರೋಫಿ ಮೇಲೆ ತುಂಬಾ ದುರಾಸೆ!
ಮಿನಿ ಮತ್ತು ಗುಲ್ಲು ಹೋದ ನಂತರ ವಿಕ್ಕಿ ಮತ್ತೊಮ್ಮೆ ಸಿಸಿಟಿವಿ ವೀಕ್ಷಿಸುತ್ತಾನೆ.
ಹೂಂ... ಇಲ್ಲಿ ಏನೋ ಸರಿಯಾಗಿಲ್ಲ.
ಶಾಲೆಯ ಮೈದಾನದಲ್ಲಿ.
ಇಲ್ಲಿ ಫಸ್.. ಫಸ್ ಶಬ್ದ ಬರ್ತಾ ಇದೆ.ಅವನು ಎಂದಾದರೂ ಓಡುತ್ತಾನೆ ಎಂಬ ಅನುಮಾನ!
ಸುಮ್ಮನೆ ನೋಡಿ, ಅವನು ಆದಷ್ಟು ಬೇಗ ಓಟದಲ್ಲಿ ನಿನ್ನನ್ನು ಮೀರಿಸುತ್ತಾನೆ.
ಒಳ್ಳೆಯದು! ನಿನ್ನ ತಂಗಿ ನಿನ್ನ ಕಾದಾಟದಲ್ಲಿ ಹೋರಾಡಲಿ.
ನಿನಗೆ ಯಾವಾಗಲೂ ನಿನ್ನ ಇನ್ಹೇಲರ್ ಬೇಕಾಗುವುದೇ?
ನಾನು ಅದನ್ನು ಬಳಸಿ ಪ್ರಯತ್ನಿಸಿದರೆ, ವೇಗವಾಗಿ ಓಡಿ ರಾಜ್‌ನನ್ನು ನಾನು ಸೋಲಿಸಬಹುದೇ?
ಹಾಗಲ್ಲ, ಅದು ಆ ರೀತಿ ಕೆಲಸ ಮಾಡುವುದಿಲ್ಲ. ನನ್ನ ಇನ್ಹೇಲರ್ ವೇಗವಾಗಿ ಓಡಲು ಅಲ್ಲ.
ಆಕಸ್ಮಿಕ ದಾಳಿಯನ್ನು ತಡೆಗಟ್ಟಲು ಮತ್ತು ನನ್ನ ಅಸ್ತಮಾವನ್ನು ನಿಯಂತ್ರಿಸಲು ಅದನ್ನು ನನ್ನ ವೈದ್ಯರು ಸೂಚಿಸಿದಂತೆ ನಾನು ಬಳಸುತ್ತಿದ್ದೇನೆ.


ಓಟದ 1 ಗಂಟೆ ಮೊದಲು.
ವಿಕ್ಕಿ ನಾನು ತುಂಬಾ ದಣಿದಿದ್ದೇನೆ ಮತ್ತು ಹಸಿದಿದ್ದೇನೆ, ನಮಗೆ ಇನ್ನೂ ಟ್ರೋಫಿ ಸಿಕ್ಕಿಲ್ಲ.
ಗುರ್ರ್
ಹೌದು ಅಣ್ಣಾ, ಒಂದು ಗಂಟೆಯಲ್ಲಿ ಓಟ ಪ್ರಾರಂಭವಾಗುತ್ತದೆ.
ನಾವು ಏನು ಮಾಡಬಹುದು?
ಐಡಿಯಾ!
ನಾವು ರಾಜ್ ಲಾಕರ್ ಅನ್ನು ಪರಿಶೀಲಿಸಬೇಕೆಂದು ನನ್ನ ಅಭಿಪ್ರಾಯ.
ನೀವಿಬ್ಬರು ಲಾಕರ್ ರೂಮ್‌ಗೆ ಮೊದಲು ಹೋಗಿರಿ. ನಾನು ನಿಮ್ಮಿಬ್ಬರನ್ನು ಸ್ವಲ್ಪ ಹೊತ್ತಿನಲ್ಲಿ ಜೊತೆಗೂಡುತ್ತೇನೆ.
ಮತ್ತೆ...
ಹೊಸ ಪ್ರಕರಣ. ಹೇಗೆ ನಡೆಯುತ್ತಿದೆ?
ಪೂಫ್!
ರಾಜ್ ಒಬ್ಬ ಜಗಳಗಂಟ, ಆದರೆ ಅವನು ತನ್ನ ವ್ಯಕ್ತಿತ್ವದ ಬಗ್ಗೆ ತುಂಬಾ ಕಾಳಜಿ ಹೊಂದಿದ್ದಾನೆ.
ಅವನು ಒಳ್ಳೆಯ ಆಟಗಾರ ಮತ್ತು ಯಾವಾಗಲೂ ಓಟದಲ್ಲಿ ಅವನೇ ಗೆಲ್ಲುತ್ತಾನೆ. ಹಾಗಾದರೆ, ಅವನು ಟ್ರೋಫಿಯನ್ನು ಯಾಕಾಗಿ ಕದಿಯುತ್ತಾನೆ? ನಾನು ಈ ಸಮಸ್ಯೆಯಲ್ಲಿ ಎಲ್ಲೋ ಏನನ್ನೋ ಅರ್ಥ ಮಾಡಿಕೊಳ್ಳಲು ವಿಫಲನಾಗಿರುವೆನೇ ಎಂದನಿಸುತ್ತಿದೆ.
ಸ್ವಲ್ಪ ಶಾಂತವಾಗಿರು ಮತ್ತು ಏನಾದರೂ ತೀರಾ ಸ್ಪಷ್ಟವಾಗಿ ತೋಚಿದರೆ ಅದನ್ನು ಖಚಿತಪಡಿಸಿಕೊ.
ನಿನಗೆ ನಮ್ಮ ಮಂತ್ರದ ನೆನಪಿದೆ ತಾನೇ?
ನಿಧಾನವಾಗಿ ಒಳಗಡೆ ಉಸಿರು ತೆಗೆದುಕೋ ಮತ್ತು ಒಂದರಿಂದ ಹತ್ತನ್ನು ಎಣಿಸು, ನಿಧಾನವಾಗಿ ಉಸಿರು ಹೊರಗೆ ಹಾಕು ಮತ್ತು ಅನುಮಾನವನ್ನು ಅದರೊಟ್ಟಿಗೆ ಹೊರ ಹಾಕು.



ಹೌದು! ನನಗೆ ಸಿಕ್ಕಿತು. ಇದುವೇ ಅದು.
ಲಾಕರ್ ಕೋಣೆಯಲ್ಲಿ.
ರಾಜ್, ಇದು ನಿನ್ನ ಲಾಕರ್‌ನಲ್ಲಿ ಸಿಕ್ಕಿತು.
ನೀನು ಟ್ರೋಫಿಯನ್ನು ಯಾಕಾಗಿ ಕದ್ದಿದ್ದಿಯಾ!
ಅವನನ್ನು ಪ್ರಿನ್ಸಿಪಾಲ್ ರ ಹತ್ತಿರ ಕರೆದುಕೊಂಡು ಹೋಗೋಣ, ಅವನನ್ನು ಶಾಲೆಯಿಂದ ಕೂಡಲೇ ಹೊರಹಾಕಬೇಕು.
ಏನು? ನಾನೇಕೆ ಅದನ್ನು ಕದಿಯಲಿ?
ಹೇಗಾದರೂ ಈ ಟ್ರೋಫಿಯನ್ನು ನಾನು ಗೆದ್ದೇ ಗೆಲ್ಲುತ್ತಿದ್ದೆ.
ನಿಲ್ಲು! ಹಾಗಾದರೆ ನಿನ್ನ ನೇರಳೆ ಟೋಪಿ ಮತ್ತು ಹಸಿರು ಜಾಕೆಟ್ ಎಲ್ಲಿದೆ?
ನಾನು ಅಭ್ಯಾಸ ಮಾಡುವ ಸಮಯದಲ್ಲಿ ಕೆಲವು ದಿನಗಳ ಹಿಂದೆ ನನ್ನ ಟೋಪಿ ಕಳೆದುಕೊಂಡೆ.
ಮತ್ತು ಹಸಿರು ಜಾಕೆಟ್ ನನ್ನ ಹತ್ತಿರ ಇಲ್ಲಾ. ನನಗೆ ಹಸಿರು ಬಣ್ಣವೆಂದರೆ ಇಷ್ಟವಿಲ್ಲ.
ಆಹ್...!
ಸಮೀರ್, ನಿನ್ನ ಬಳಿ ಹಸಿರು ಜಾಕೆಟ್ ಇಲ್ಲವೇ?


ಆಆ..ನೀನೀ..ನೀನು ನನ್ನ ಮೇಲೆ ತತತ..ತಪ್ಪು ಹೊರಿಸಲು ಹೊರಟಿದ್ದೀಯಾ.
ವಿ..ವಿ..ವಿಕ್ಕಿ ಯಾರು ನಿನ್ನನ್ನು ಪತ್ತೆದಾರನನ್ನಾಗಿ ಮಾಡಿದ್ದು?
ಸಮೀರ್, ನಿನಗೆ ಅಭ್ಯಂತರ ಇಲ್ಲದಿದ್ದರೆ ನಿನ್ನ ಲಾಕರ್ ಸ್ವಲ್ಪ ನಮಗೆ ತೋರಿಸಬಹುದೇ?
ಏನು? ನನ್ನ ಲಾಕರ್ ಯಾಕೆ?
ಅದರಲ್ಲಿ ನಾನು ಏನೂ ಇಟ್ಟಿಲ್ಲಾ.
ಅವರೆಲ್ಲರೂ ಸೇರಿ ಅವನ ಲಾಕರ್ ಅನ್ನು ತೆರೆದು ನೋಡಿದರು ಮತ್ತು ಅವನ ಪುಸ್ತಕಗಳು ಮತ್ತು ಬ್ಯಾಗ್‌ಗಳ ಜೊತೆಗೆ ಹಸಿರು ಜಾಕೆಟ್ ಮತ್ತು ಟೋಪಿ ಇರುವುದು ಗಮನಿಸಿದರು.
ಸಮೀರ್, ನೀನಾ ಇದನ್ನೆಲ್ಲಾ ಮಾಡಿದ್ದು!!!!
ನಾನು ಮತ್ತೆ ಸಿಸಿಟಿವಿ ಪರಿಶೀಲಿಸಿದೆ; ಬೆಳಿಗ್ಗೆ ಅಸೆಂಬ್ಲಿಯಲ್ಲಿ ನೀನು ಅಲ್ಲಿ ಇರಲಿಲ್ಲ. ಆಗ ನನ್ನ ಅನುಮಾನ ಜಾಸ್ತಿ ಆಯ್ತು.
ರಾಜ್ ಮತ್ತು ಉಳಿದವರೆಲ್ಲರೂ ಅಲ್ಲಿದ್ದರು, ಮತ್ತು ಟ್ರೋಫಿಯನ್ನು ತೆಗೆದುಕೊಂಡ ಹುಡುಗ ಸಮೀರ್‌ನಂತೆಯೇ ಕಾಣುತ್ತಿದ್ದ.
ಹಿನ್ನೋಟ!
ನಿನ್ನೆ ನಡೆದದ್ದಕ್ಕಾಗಿ ನನಗೆ ತುಂಬಾ ಬೇಸರವಾಯಿತು.
ಎಲ್ಲರನ್ನೂ ಚುಡಾಯಿಸಿತ್ತಿದ್ದ ರಾಜ್‌ಗೆ ಸರಿಯಾಗಿ ಶಿಕ್ಷೆಯಾಗಬೇಕು ಎಂದು ಈ ರೀತಿ ಮಾಡಿದೆ.
ಸಮೀರ್, ನೀನು ಮಾಡಿದ ಕಳ್ಳತನದ ಆರೋಪವನ್ನು ನನ್ನ ತಲೆ ಮೇಲೆ ಹೇಗೆ ಹಾಕಿದೆ?
ಮತ್ತು ಮಿನಿ, ನಾನೇ ಟ್ರೋಫಿಯನ್ನು ಕದ್ದಿದ್ದೇ ಎಂದು ನೀನು ಹೇಗೆ ಭಾವಿಸಿದೆ?


ನ..ನ..ನ.. ನನ್ನನ್ನು ಕ್ಷಮಿಸಿಬಿಡು ರಾಜ್.
ಸಮೀರ್, ನಿನ್ನ ಅಭಿಪ್ರಾಯ ಸರಿಯಾದದ್ದೇ, ಆದರೆ ನೀನು ಈ ರೀತಿ ಮಾಡಿದ್ದು ತುಂಬಾ ದೊಡ್ಡ ತಪ್ಪು.
ಮತ್ತೇ ರಾಜ್ ನೀನು ಈ ಬಾರಿ ಶಿಕ್ಷೆಯಿಂದ ತಪ್ಪಿಸಿಕೊಂಡಿದ್ದೀಯ ಮತ್ತು ಇನ್ನು ಮುಂದೆ ಮತ್ತೆ ಯಾರಿಗಾದರೂ ನೀನು ಚುಡಾಯಿಸಲು ಪ್ರಯತ್ನ ಪಟ್ಟರೆ,
ನಾನೇ ನಿನ್ನನ್ನು ಪ್ರಾಂಶುಪಾಲರ ಹತ್ತಿರ ಕರೆದುಕೊಂಡು ಹೋಗುತ್ತೇನೆ.
ರಾಜ್ ತನ್ನ ತಪ್ಪಿಗೆ ನಾಚಿಕೆಯಿಂದ ತಲೆ ತಗ್ಗಿಸುತ್ತಾನೆ.
ರಾಜ್ ಮತ್ತು ಉಳಿದವರೆಲ್ಲರೂ ನನ್ನನ್ನು ಕ್ಷಮಿಸಿ ಬಿಡಿ, ಯಾವತ್ತಿಗೂ ಟ್ರೋಫಿಯನ್ನು ಕದಿಯಲು ನಾನು ಬಯಸಿರಲಿಲ್ಲ.
ನನ್ನನ್ನೂ ಕೂಡ ಕ್ಷಮಿಸಿ. ನಾನು ಮಾಡಿದ ತಪ್ಪಿನ ಅರಿವಾಗಿದೆ.
ಪರವಾಗಿಲ್ಲ ರಾಜ್ ಮತ್ತು ಸಮೀರ್, ನಾವೆಲ್ಲರೂ ಸ್ನೇಹಿತರು.
ಇಲ್ಲಿ ಕೇಳಿ ಎಲ್ಲರೂ! ಓಟದ ಕಥೆ ಏನು?
ಓಟದಲ್ಲಿ ಯಾರು ಗೆಲ್ಲುತ್ತಾರೆಂದು ನೋಡೋಣ!!
ಅಂತೂ ಪ್ರಕರಣ ಬಗೆಹರಿಯಿತು!


ಓಟದ ಸ್ಪರ್ಧೆಯಲ್ಲಿ.
ಸಮೀರ್ ಓಟದಲ್ಲಿ ರಾಜ್ ನನ್ನ ಹಿಂದಿಕ್ಕಿ ಟ್ರೋಫಿಯನ್ನು ಗೆದ್ದನು.
FINISH
ಹುರ್ರೇ!
ಸಮೀರ್, ನೀನು ರಾಜ್ ಗೆ ಸರಿಯಾದ ಪಾಠ ಕಲಿಸಿದ್ದೀಯಾ ಎಂಬುವುದು ನನ್ನ ಭಾವನೆ.
ಅವನಿಗೆ ಪಾಠ ಕಲಿಸಲು ಇದೇ ಸರಿಯಾದ ದಾರಿ; ಆದರೆ ನೀನು ಅದನ್ನು ಮಾಡಿದ ರೀತಿ ತಪ್ಪಾಗಿದೆ ಅಷ್ಟೇ.
ಹೌದು ವಿಕ್ಕಿ ನೀನು ಸರಿಯಾಗೇ ಹೇಳಿದ್ದೀಯಾ!
ನಾನು ಓಟವನ್ನು ಸೋತೆ.
ಸ್ವಲ್ಪ ಸಮಯದ ನಂತರ.
ಬಹಳ ಚೆನ್ನಾಗಿ ಮಾಡಿದ್ದೀಯಾ ವಿಕ್ಕಿ! ನೀನು ಈ ಪ್ರಕರಣವನ್ನು ಬಹಳ ಸುಲಭವಾಗಿ ಬಗೆಹರಿಸಿದೆ ಮತ್ತು ಕದ್ದ ಟ್ರೋಫಿಯ ಹಿಂದಿನ ನಿಜವಾದ ಕಳ್ಳನ ಮುಖವಾಡವನ್ನು ಬಿಚ್ಚಿಟ್ಟೆ! ಜೊತೆಗೆ, ನೀನು ಈ ವರ್ಷ ಓಟದಲ್ಲೂ ಸಹ ಭಾಗವಹಿಸಿದ್ದಿ! ಇದಕ್ಕಿಂತ ಹೆಚ್ಚು ನಿನ್ನ ಬಗ್ಗೆ ಹೆಮ್ಮೆಪಡಲು ನನಗೆ ಸಾಧ್ಯವಿಲ್ಲ!
ಧನ್ಯವಾದ, ಪಫ್ಫಿ! ವೈದ್ಯರ ಸಲಹೆಯ ಪ್ರಕಾರ ಯಾವಾಗಲೂ ನಾನು ನನ್ನ ಇನ್ಹೇಲರ್ ಅನ್ನು ನಿಯಮಿತವಾಗಿ ಬಳಸುತ್ತೇನೆ.
ರಹಸ್ಯಗಳನ್ನು ಬಗೆಹರಿಸುವುದು ಹಿತವೆನಿಸುತ್ತದೆ, ಆದರೆ ಅದಕ್ಕಿಂತ ಇನ್ನೂ ಹಿತಕಾರಿ ಯಾವುದೆಂದು ನಿನಗೆ ಗೊತ್ತೇ? ಒಬ್ಬರಿಗೊಬ್ಬರು ಅನುಕಂಪ ತೋರುವುದು. ನಿಜವಾದ ಟ್ರೋಫಿ ಯಾವುದೆಂದರೆ ಗೆಳೆತನ, ಮತ್ತು ಇದು ಯಾವುದೇ ಓಟ ಅಥವಾ ರಹಸ್ಯ ಭೇದಿಸುವುದಕ್ಕಿಂತ ಹೆಚ್ಚು ಮೌಲ್ಯ ಹೊಂದಿದೆ. ನಾವೆಲ್ಲರೂ ಪರಸ್ಪರ ದಯೆಯುಳ್ಳ ಚಾಂಪಿಯನ್ಸ್ ಆಗೋಣ.
ಮುಕ್ತಾಯ.

A **Cipla** INITIATIVE

breathe free

# TUFFIES

LET'S GO DHAN-TA-DAA!!!

## Calling all Super Parents!

Has your young champion conquered challenges with their unbeatable spirit?

**Get ready to inspire the world!**

Share your child's heroic tale of bravery and victory! Their story could be the lucky one to get featured in the Tuffies comic book, revealing how amazing heroes truly are!

**All you have to do is:**

1. Scan the QR code to register
2. Fill in all the details
3. Write your kid's story
4. Accept the consent form

Join us in celebrating the unbeatable spirits of youngsters - Because every challenge they overcome adds a thrilling chapter to their incredible journey!

For further information on how to manage asthma and to know more about Tuffies, visit https://www.breathefree.com/tuffies/

breathefreeworld | Breathefree | @breathefreetv






DISCLAIMER: The content has been developed and designed by (I-realities Technology Private Limited) for Cipla Ltd. This information is for the purpose of awareness only, not intended nor implied to be a substitute for professional medical advice, diagnosis, or treatment. Please consult your doctor/ healthcare professional before starting any treatment/medicine/ inhaler. The CIPLA mark and logo are the sole intellectual property of Cipla Limited.

Note: The story depicted is based on hypothetical cases. Characters and details represented here is purely fictional and is for illustrative purposes only. Not for Actual patients. Do consult your doctor for more information regarding your condition.


SCAN QR CODE TO DOWNLOAD TUFFIES E-COMIC BOOK

# Cipla

## HELPING INDIA **BREATHEFREE***




Do consult your doctor for more information regarding your condition

Disclaimer: The content in this booklet has been developed and designed by (I-realities Technology Private Limited) for Cipla Ltd. Information in this literature is for the purpose of awareness only, not intended nor implied to be a substitute for professional medical advice, diagnosis, or treatment. Please consult your doctor/ healthcare professional before starting any treatment/medicine/ inhaler. Cipla makes every effort to provide information that is accurate and timely but makes no guarantee in this regard. Although great care has been taken in compiling and checking the information, the authors, agency, and its associates or agents, and sponsors shall not be responsible, or in any way liable for any errors, omissions or inaccuracies in this publication whether arising from negligence or otherwise, however, or for any consequences arising therefrom. No part of this may be reproduced, transmitted, or stored in any form or by any means either mechanically or electronically without prior permission. The CIPLA mark and logo are the sole intellectual property of Cipla Limited.

*Cipla helps patients with respiratory conditions breathe free by equipping them with a range of therapeutic solutions like inhalers, spacers, nebulizers, nasal sprays, and syrups.

SCAN TO LEARN
THE CORRECT INHALER TECHNIQUE WITH
breathe free Digital Educator